

**Then even nothingness was not, nor existence, There was no air then, nor the heavens beyond it.**
**What covered it? Where was it? In whose keeping? Was there then cosmic water, in depths unfathomed?**

ಋಗ್ವೇದ (10:129)

ಏನೂ ಇಲ್ಲ
ದಲ್ಲಿಗೆ ಹೊರಟಿದ್ದೇನೆ
ಅಲ್ಲಿ
ಇಲ್ಲವೆಂಬುದೂ ಇಲ್ಲ

ಮಾತಿಲ್ಲ
ಕತೆಯಿಲ್ಲ
ಪದ್ಯವಿಲ್ಲ
ಭಾಷೆಯೆಂಬ ಭಾಷೆಯೂ
ಇಲ್ಲ

ಗಾಳಿಯಿಲ್ಲ
ಎಂತಲೇ ಸದ್ದುಗದ್ದಲದ ಗುದ್ದಿಲ್ಲ
ಬೆಳಕಿಲ್ಲ

ಆಕಾರ ನಿರಾಕಾರ
ಆಕಾಶ ನಿರಾಕಾಶ ಸಹ
ಇಲ್ಲ
ಏನೂ ಇಲ್ಲದಲ್ಲಿ
ನಾನೇನೆಂಬುದೇ ಸದ್ಯ
ಸಂದಿಗ್ಧ

ಹಾಗೆಂದರೇನೆಂದು
ನೀನೂ
ಬಂದು ತಿಳಿಯಬಹುದು

ಸಾಧ್ಯವಾದರೆ
ನನಗೂ ತಿಳಿಹೇಳ
ಬಹುದು

ರುದ್ರನೀಲ ಥಾಪಸೆ, ಈವೊತ್ತು, ಆಗಷ್ಟೇ ಹಾಸಿಗೆ ಬಿಟ್ಟೆದ್ದು ಮುಖಶೌಚದಲ್ಲಿ ತೊಡಗಿದ್ದನಷ್ಟೆ, ಅವನ ಮನೆಯ ಲ್ಯಾಂಡ್‌ಲೈನು ರಿಂಗಾಯಿತು. ಹತ್ತಾ ಹಳತಾದ ಫೋನು; ಇಪ್ಪತ್ತನೇ ಶತಮಾನದ ಬಲು ಪ್ರಾಚೀನ ದನಿಯುಳ್ಳ ಮುದಿಗೂಬೆಯ ಹಾಗೆ, ಒಂದೇ ಸಮ, ಹೊತ್ತಲ್ಲದ ಹೊತ್ತಿನಲ್ಲಿ ಒರಲಿಕೊಂಡಿತು. ಹಿಂದಿನ ರಾತ್ರಿಯಷ್ಟೇ ಇದ್ದಕ್ಕಿದ್ದಂತೆ ನಡುನಿದ್ರೆಯಿಂದೆದ್ದು, ಕನಸಂತಹ ಕನಸಿನಲ್ಲಿ ಹೊಳೆದುವೇನೋ ಅಂತನಿಸಿ ಬಲುವಾಗಿ ಕಾಡಿ, ಬಳಿಕ ಲ್ಯಾಪ್‌ಟಾಪಿನಲ್ಲಿ ಕೀಲಿಸಿಕೊಂಡ ತನ್ನವೇ ಈ ಮೇಲ್ಕಾಣಿಸಿದ ಸಾಲುಗಳನ್ನು, ತಂತನಗೇ ವಾಷ್‌ಬೇಸಿನೆದುರು ಹಲ್ಲುಜ್ಜುತ್ತ, ಆಗಿಂದಾಗ್ಗೆ ಬಾಯ್ತುಂಬುವ ನೊರೆ ತುಪ್ಪುತ್ತ, ಆಗೀಗ ಕನ್ನಡಿಯಲ್ಲಿಣಿಕಿ ತನ್ನ ನರೆಗೂದಲ ಮೋರೆ ನೋಡಿಕೊಂಡು... ಬಲುಗತ್ತಿನಲ್ಲಿ ಮೆಲುಕಿಕೊಂಡಿದ್ದವನಿಗೆ ಮೊಬೈಲು ಬಂದ ಮೇಲೆ ಆಗೊಮ್ಮೆ ಈಗೊಮ್ಮೆಯಷ್ಟೇ ರಿಂಗಣಿಸುವ 'ಸ್ಥಿರವಾಣಿ'ಯ ಕರೆಯು, ಸಮಯಾಸಮಯವಿಲ್ಲದೆ ಜೋರುದನಿಯಲ್ಲಿ ಕೂಗಿದ್ದೇ ಕರ್ಕಶವೆನಿಸಿ, ಒಮ್ಮಿಂದೊಮ್ಮೆ ರಸಭಂಗಕ್ಕೀಡಾದಂತನ್ನಿಸಿತು. ಕೂಡಲೆ, ವಾಷ್‌ಬೇಸಿನ್ನಿನ